

# ಬಹುರೂಪಿ ಬುಡಕಟ್ಟು

## ವಿಶ್ವದೊಳಗಿನ ಕಿರು ವಿಶ್ವಗಳು!

**ಅಭಿವೃದ್ಧಿಯ ಪಥದಲ್ಲಿ ಹೊಸ ಹೊಸ ಆವಿಷ್ಕಾರಗಳ ಹುಚ್ಚುಕುದುರೆಯನ್ನೇರಿ ಮನುಷ್ಯ ನಾಗಾಲೋಟದಲ್ಲಿ ಓಡುತ್ತಲೇ ಇದ್ದಾನೆ. ಈ ಓಟದ ವೇಗದಲ್ಲಿ ಹಿಂತಿರುಗಿ ನೋಡಿ, ತಾನು ಕಳೆದುಕೊಳ್ಳುತ್ತಿರುವುದು ಏನು ಎಂಬುದನ್ನು ಆಲೋಚಿಸುವ ವ್ಯವಧಾನವನ್ನೂ ಕಳೆದುಕೊಂಡಿದ್ದಾನೆ. ನವನಾಗರಿಕತೆಯ ಮಥನದಲ್ಲಿ ಒಳಿತಿಗಿಂತ ಕೇಡೇ ಹೆಚ್ಚು ಉದ್ಭವವಾಗುತ್ತಿರುವ ಕಾಲವಿದು. ಪ್ರಕೃತಿ ನಮಗೆ ವಿಧಿಸುತ್ತಿರುವ ಈ ಎಚ್ಚರಿಕೆಯ ದಿಗ್ಬಂಧನದ ಸಮಯದಲ್ಲಾದರೂ ನಾವು, ನಿಸರ್ಗದೊಟ್ಟಿಗೆ ಅದರ ಭಾಗವಾಗಿಯೇ ಬದುಕಿ, ತಾಳಿಕೆಯ ಜೀವನಕ್ರಮದ ಮಾದರಿಯಂತಿರುವ ಹಲವಾರು ಬುಡಕಟ್ಟು ಜನಾಂಗಗಳನ್ನು ನಮ್ಮ ಪೂರ್ವಗ್ರಹದೃಷ್ಟಿಯನ್ನು ಬಿಟ್ಟು ನೋಡಬೇಕಾಗಿದೆ. ನಮ್ಮ ಆಧುನಿಕ ಸಂದರ್ಭದಲ್ಲಿ 'ಅನಾಗರಿಕ'ರಾಗಿ ಕಾಣುತ್ತಿರುವ ಅವರಲ್ಲಿಯೇ ನಮ್ಮ ನೆಮ್ಮದಿಯ ನಾಳೆಗೆ ಬೇಕಾದ ವಿವೇಕವೂ ಇರಬಹುದೇ? ಈ ದೃಷ್ಟಿಯಿಂದಲೇ ಜಗತ್ತಿನ ಕೆಲವು ಬುಡಕಟ್ಟು ಜನಾಂಗಗಳನ್ನೂ ಅವುಗಳ ವೈಶಿಷ್ಟ್ಯಗಳನ್ನೂ ಇಲ್ಲಿ ಪಟ್ಟಿಮಾಡಲಾಗಿದೆ.**

**■ ಮಾಂಟೊ**